ಇ. ಹೆಜ್‌ಮಾಡಿ ಕೋಡಿ ಮೀನುಗಾರಿಕೆ ಇಳಿದಾಣ:

ಉಡುಪಿ ಜಿಲ್ಲೆ ಹೆಜಮಾಡಿಯಲ್ಲಿ ರೂ.95.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮೀನುಗಾರಿಕೆ ಇಳಿದಾಣದ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದ್ದು ಬಹುತೇಕ ಕಾಮಗಾರಿಗಳು ಮುಗಿದಿದ್ದು, ನೀರು ಸರಬರಾಜು ವ್ಯವಸ್ಥೆ ಮಾತ್ರ ಬಾಕಿ ಇರುತ್ತದೆ ಧಕ್ಕೆಯ ಎದುರುಗಡೆ ನೀರು ಸಾಕಷ್ಟು ಹರಿಯದೆ ಹೂಳು ತುಂಬಿದ್ದು ನೀರು ಸರಾಗವಾಗಿ ಹರಿಯುವಂತೆ ಮಾಡಲು ನದಿಯಲ್ಲಿದ್ದ ತಡೆ ನಿವಾರಿಸಲು ಕ್ರಮ ವಹಿಸಲಾಗಿದೆ.

2. ಉತ್ತರಕನ್ನಡ ಜಿಲ್ಲೆಯ ಗಂಗಾವಳಿಯಲ್ಲಿ ಆರ್.ಐ.ಡಿ.ಎಫ್. ಯೋಜನೆಯಡಿ ಅಂದಾಜು ವೆಚ್ಚ ರೂ. 105.00 ಲಕ್ಷಗಳಲ್ಲಿ ಮೀನು ಗಾರಿಕಾ ಇಳಿದಾಣವನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿರುತ್ತದೆ.

ಈ. 2002-03ನೇ ಸಾಲಿನ ಆಯವ್ಯಯದಲ್ಲಿ ರೂ.40.00 ಲಕ್ಷಗಳನ್ನು ಮೀಸಲಿಡಲಾಗಿದೆ.

ಉ. 5 ಮೀನುಗಾರಿಕೆ ಬಂದರುಗಳನ್ನು ಮತ್ತು 1 ಮೀನುಗಾರಿಕೆ ಇಳಿದಾಣವನ್ನು ಪೂರ್ಣ ಗೊಳಿಸಲಾಗಿದೆ. ಮೊತ್ತದ ವಿವರ ಕೆಳಕಂಡಂತಿದೆ:-

1. ಮಂಗಳೂರು 1ನೇ ಹಂತ ರೂ. 114.35ಲಕ್ಷ
2. ಮಲ್ಪೆ 1ನೇ ಹಂತ ರೂ. 546ಲಕ್ಷ
3. ಹೊನ್ನಾವರ ಮೀನುಗಾರಿಕೆ ಬಂದರು ರೂ. 120.98ಲಕ್ಷ
4. ತದಡಿ ಮೀನುಗಾರಿಕೆ ಬಂದರು ರೂ. 1137.68 ಲಕ್ಷ
5. ಕಾರವಾರ ಮೀನುಗಾರಿಕೆ ಬಂದರು ರೂ. 26.00ಲಕ್ಷ
6. ಕೋಡಿಬೆಂಗ್ರೆ ಮೀನುಗಾರಿಕೆ ಇಳಿದಾಣ ರೂ. 179.00ಲಕ್ಷ

ಕೊರಟಗೆರೆ ಕ್ಷೇತ್ರದ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆ

378(674) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೊರಟಗೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ಪ್ರತಿದಿನ ಈ ಚಿಕಿತ್ಸಾಲಯಕ್ಕೆ ಪರೀಕ್ಷೆಗಾಗಿ ಬರುವ ಜಾನುವಾರುಗಳ ಸಂಖ್ಯೆ ಎಷ್ಟು:

ಆ. ಈ ಚಿಕಿತ್ಸಾಲಯಗಳಲ್ಲಿ ಔಷಧೋಪಚಾರದ ಕೊರತೆಯು ತೀವ್ರ ರೀತಿಯಲ್ಲಿರುವುದು ಗಮನಕ್ಕೆ ಬಂದಿದೆಯೇ:

ಇ. ಹಾಗಿದ್ದರೆ, ಜಾನುವಾರುಗಳ ಚಿಕಿತ್ಸೆಗೆ ಸಕಾಲದಲ್ಲಿ ಔಷಧೋಪಚಾರವನ್ನು ಒದಗಿಸುವ ವ್ಯವಸ್ಥೆ ಮಾಡಿ ಅನುಕೂಲ ಕಲ್ಪಿಸಿ (ಕೊಡುವುದು ಯಾವಾಗ)?

ಶ್ರೀ ಎಂ. ಮಹದೇವ್(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಪಶು ಆಸ್ಪತ್ರೆಗಳು -2
ಪಶು ಚಿಕಿತ್ಸಾಲಯ -2

ದಿನಂಪ್ರತಿ ಸರಾಸರಿ - 18 ಜಾನುವಾರುಗಳು.

ಆ. ಕೆಲವು ವಸ್ತುಗಳ ಕೊರತೆ ಇದೆ.

ಇ. ಈಗಾಗಲೇ ಪ್ರಸಕ್ತ ಸಾಲಿನಲ್ಲಿ ರೂ. 2.09,528-00 ಬೆಲೆಯ ಔಷಧಿಗಳನ್ನು ಕೊರಟಗೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪಶುವೈದ್ಯಕೀಯ ಸಂಸ್ಥೆಗಳಿಗೆ ಸರಬರಾಜು ಮಾಡಲಾಗಿದ್ದು, ವೈದ್ಯಕೀಯ ಔಷಧಿಗಳನ್ನು ಖರೀದಿಸಲು ಇತ್ತೀಚೆಗೆ ರೂ.20.00 ಲಕ್ಷವನ್ನು ಜಿಲ್ಲಾಧಿಕಾರಿ, ತುಮಕೂರು ಇವರಿಗೆ ಒದಗಿಸಲಾಗಿದೆ.

ಚಿಂತಾಮಣಿಕ್ಷೇತ್ರದಲ್ಲಿ ಕೈಮಗ್ಗ ನೇಕಾರರಿಗೆ ವಸತಿ

379(503) ಶ್ರೀ ಚೌಡಾರೆಡ್ಡಿ (ಚಿಂತಾಮಣಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಸೂರಪಲ್ಲಿ ಗ್ರಾಮದ ಪಕ್ಕದಲ್ಲಿ ಶಿಡ್ಲಘಟ್ಟ ಚಿಂತಾಮಣಿ ರಸ್ತೆಗೆ ದಕ್ಷಿಣಕ್ಕೆ ಇರುವ ಸುಮಾರು 10 ಎಕರೆ ಜಮೀನಿನಲ್ಲಿ ಕೈಮಗ್ಗ ನೇಕಾರರಿಗೆ ವಸತಿ ನಿರ್ಮಿಸಲು ಜಮೀನು ಕೊಟ್ಟಿರುವುದು ನಿಜವೇ?

ಆ. ಈ ಹಿಂದೆ ಈ ಜಮೀನಿನಲ್ಲಿ ವಸತಿಗಳನ್ನು ನಿರ್ಮಿಸಲು ಶಂಕು ಸ್ಥಾಪನೆ ನೆರವೇರಿಸಿರುವುದು ನಿಜವೇ?

ಇ. ಈ ರೀತಿ ಶಂಕು ಸ್ಥಾಪನೆ ಆಗಿದ್ದರೂ ಸಹ ಇದುವರೆಗೂ ಕೈಮಗ್ಗ ಮಂಡಳಿ ಇಲಾಖೆಯವರು ಇಲ್ಲಿರತಕ್ಕಂತಹ ಬಡ ರೇಷ್ಮೆನೇಕಾರರಿಗೆ ವಸತಿ ಸೌಲಭ್ಯವನ್ನು ಒದಗಿಸುವಲ್ಲಿ ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ?

ಈ. ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. 1993-94ನೇ ಸಾಲಿನಲ್ಲಿ ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಸೂರಪಲ್ಲಿ ಗ್ರಾಮದ ಪಕ್ಕದಲ್ಲಿ ಶಿಡ್ಲಘಟ್ಟ ಚಿಂತಾಮಣಿ ರಸ್ತೆಗೆ ದಕ್ಷಿಣಕ್ಕೆ ಇರುವ ಸರ್ವೆ ನಂ.39ರಲ್ಲಿ 10 ಎಕರೆ ಜಮೀನು ನೇಕಾರರಿಗೆ ವಸತಿ ನಿರ್ಮಿಸಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಖರೀದಿಸಿರುವುದು ನಿಜ.

ಆ. ಹೌದು

ಇ. ಕೈಮಗ್ಗ ಕೈಗಾರಿಕಾ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅದರಲ್ಲಿ 250 ಮನೆಗಳ ನಿರ್ಮಾಣ, ಸುಧಾರಿತ ಮಗ್ಗಗಳನ್ನು ಅಳವಡಿಸುವುದು ಹಾಗೂ ಇತರೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅಲ್ಲದೆ ಯೋಜನಾ ವರದಿಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿ ಪೂರ್ವಭಾವಿಯಾಗಿ ಚಿಂತಾಮಣಿ ತಾಲ್ಲೂಕಿನ, ಸೋರಪಲ್ಲಿ ಗ್ರಾಮದಲ್ಲಿ ಮನೆಗಳನ್ನು ನಿರ್ಮಿಸುವ ದೃಷ್ಟಿಯಿಂದ ಮೇಲಿನ ಜಮೀನನ್ನು ಖರೀದಿಸಲಾಗಿತ್ತು. ಖರೀದಿಯ ನಂತರ ನಿವೇಶನಗಳನ್ನು ಅಭಿವೃದ್ಧಿ ಪಡಿಸಿದ್ದು, ಮನೆಗಳ ನಿರ್ಮಾಣದ ವೆಚ್ಚವು ವಿಶ್ವ ಯೋಜನೆಯಲ್ಲಿ ರೂಪಿಸಿದ ಸೀಮಿತ ಮಾದರಿಗಿಂತ ಅಧಿಕ ಪ್ರಮಾಣದ ವೆಚ್ಚವಾಗುತ್ತಿದ್ದುದರಿಂದ ಸರ್ಕಾರ ಈ ಯೋಜನೆಯನ್ನು ಅನುಮೋದಿಸಿ ಅನುಷ್ಠಾನಗೊಳಿಸಲಾಗಲಿಲ್ಲ. ಈ ದಿಸೆಯಲ್ಲಿ ನೇಕಾರರ ಆಸಕ್ತಿಯೂ ಸಹ ಮಂದಗತಿಯಲ್ಲಿದೆ.